869

ದಿವಾಳಿಯಾದ ಡಿಕ್ರಿ ದೇಣೇದಾರ ಗುಬ್ಬಿ ಸ್ಥಳದ ಸಂಜೀವಯ್ಯನ ವಿಷಯದಲ್ಲಿ.

ಸ್ಟ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರ್ 42.

ಹುಕುಂ.

ಮೇಲ್ಕಂಡ ಸಂಜೀವಯ್ಯನು ಖುಲಾಸೆಯಾಗಬೇಕೆಂದು ಕೋರಿ ಬರದುಕೊಂಡ ಅರ್ಜಿಯು ಸಬ ಜಡ್ಜರಾದ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನ ಪರವಾಗಿ ಸಮಕ್ಷಮದಲ್ಲಿಯೂ ಮತ್ತು ಐರ್ಜ ಅರ್ಜೀದಾರನ ಲೇಣೇದಾರರಾದ 1ನೇ ಮದೋಡಪ್ಪನ ಕಡೆ ಪ್ಲೀಡರ್ ನರಸಿಹ್ಮಾಚಾರ್ ಯದುರಾಗಿಯೂ ದರ್ಯಾಫ್ತಿ ಮಾಡಲ್ಪಟ್ಟಿತು. ಈ ಕೆಳಗೆ ನಮೂದ್ಮಾಡಲ್ಪಡುವ ಲೇಣೇದಾರ್ರಿಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ, 2ನೇ ಕೆಂಪನಂಜಪ್ಪ, 3ನೇ ಲಿಂಗಪ್ಪ.

ಸದರೀ ಸಂಜೀವಯ್ಯನು ದಿವಾಳಿಯಾದವನೆಂದುನ್ನು ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿರೂಪಣೆಗಳ ಫಲವನ್ನ ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತದೆ. ಈ ಕೋರ್ಟು ಹೆಡ್ ಮುನಷಿಯನ್ನು ಜಾಮೀನು ಕೊಟ್ಟು ಕೂಡ್ಲೆ ಐರ್ಜ ದಿವಾಳಿಯಾದವನ ಜಿಂದಿಗಿಗೆ ರಿಸೀವರಾಗಿ ವೊಕರರ್ತ್ಮಾಡಲ್ಪಡತಕ್ಕದ್ದೆಂದುನ್ನು ಸದರೀ ರಿಸೀವರಾದವನು ಪಡನೇ ದಿವಾಳಿಯಾದವನ ಜಿಂದಗಿಗೆ ಜವಾಬ್ ಮಾಡತಕ್ಕ ಬಗ್ಯೂ ನಿಗೆವಾನಿ ಮಾಡತಕ್ಕ ಬಗ್ಯೂ ಸಹ ಕೋರ್ಟ್ನವರಿಂದ ಮುಂದೆ ಆರಡರ್ ನಿರೀಕ್ಷಣೆಯಿಂದ ಮುಂಜರ್ಮಾಡಬಹುದಾದಂಥಾ ಇಬ್ಬರು ಅಥವಾ ಹೆಚ್ಚು ಸಂಖ್ಯಾಕವಾದ ಲಾಯಕ್ ಜಾಮೀನು ದಾರರೊಡನೆ ಸಾಕಾದಷ್ಟು ಈಡಿನಿಂದ ಪತ್ರವನ್ನ ಬರದುಕೊಟ್ಟು ತನ್ನ ರಿಸೀವರ ಕೆಲಸಗಳಿಗೆ ವುದ್ಯುಕ್ತ ಪಡತಕ್ಕದ್ದೆಂದುನ್ನೂ ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿಫಲಕ್ಕಾಗಿ ದಿವಾಳಿಯಾದವನ ಲೇಣೇದಾರರಿಗೆ ಬಟವಾಡೆ ಮಾಡಿದ ವೊಬಲಗಿನ ಬಾಕಿ ಹಣದಲ್ಲಿ ದರ ಕೇಕಡಾ ರೂಪಾಯಿ ಮೇರೆ ಕಮ್ಮಿಷ್ಟ ನಿಲ್ಲಿಸಿಕೊಳ್ಳತಕ್ಕದ್ದೆಂದುನ್ನೂ ಸಹ ಹುಕುಂ ಮಾಡಲ್ಪಟ್ಟಿತ್ತೆ.

ಸ್ಟ 1884ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪಟ್ಟಿತು.

ದಿವಾಳಿಯಾದ ಡಿಕ್ರಿ ದೇಣೇದಾರ ದೇವನಹಳ್ಳಿ ಕಸಬಾದಲ್ಲಿ ಯಿರುವ ಸೈದು ಯಿಮಾಮಿನ ವಿಷಯದಲ್ಲಿ,

ಸ್ಟ 1884ನೇ ಇಸವಿ ದಿವಾಳಿ ಕೇಸ್ ನಂಬರು 84.

ಹುಕುಂ.

ಮೇಲ್ಕಂಡ ಸೈದ್ ಯಿಮಾಮನು ನಿರ್ಬಂಧದಿಂದ ಖುಲಾಸೆ ಆಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ ಜಡ್ಜ್ ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರನಾದ ಸೈದ್ ಯಿಮಾಮನನ್ನು ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಬೈರ್ಜ ಹುಸೇನ್‌ಸಾಬಿ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸೈದ್ ಯಿಮಾಮಸಾಬಿ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವಸಾಲಕ್ಕೂ ಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಟ 1884ನೇ ಇಸವಿ ಆಗಸ್ಟ್ 28ನೇ ತಾರೀಖಿನಲ್ಲಿ ಈ ಕೋರ್ಟು ವೊಹರ್ ನಮ್ಮ ದಸ್ತಖತ ನಿಸಿ ಕೊಡಲ್ಪತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ದೇಣೇ ಹುಟ್ಟಿದ್ದು.	ದೇಣೇಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಟಿಪ್ಪಣಿ.
1	ಕಲ್ಲಿಕೋಟೆ ಬೈತೂರುನಲ್ಲಿ ಯಿರುವ ಬೈರ್ಜ ಹುಸೇನ್‌ಸಾಬಿ.	450—0—0	1883	ಬೈತೂರು ಮುನಿಸಿಫ್ ಕೋರ್ಟು 1883ನೇ ಇಸವಿ ಅರಜಿನಲ್ 180ನೇ ನಂಬರ್ ಡಿಕ್ರಿ ಬಾಬತು.	